ದಿ: **11.02.2022** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಡಿ.ಎಸ್ ವಕೀಲರಿಂದಃ

ದಾವಾ ಆಸ್ತಿಗೆ ಸಂಬಂದಪಟ್ಟಂತೆ **31** ಕಂದಾಯ ದಾಖಲೆಗಳನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ-**14** ರಿಂದ **44** ಎಂದು ಗುರುತಿಸಲಾಯಿತು.

ಪರ್ಕಳ ಮಂಡಳ ಪಂಚಾಯತಿಯವರು ನೀಡಿದ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ-**45** ಎಂದು ಗುರುತಿಸಲಾಯಿತು.

ಪರ್ಕಳ ಮಂಡಳ ಪಂಚಾಯತಿಯವರು ನೀಡಿದ ಕಟ್ಟಡ ಪರವಾನಿಗೆ ಹಾಜರುಪಡಿಸಿದ್ದು ಅದನ್ನು ನಿ.ಡಿ-**46** ಎಂದು ಗುರುತಿಸಲಾಯಿತು.

ಹೆರ್ಗ ಗ್ರಾಮದ ಸರ್ವೆ ನಂಬ್ರ **310/2** ಕ್ಕೆ ಸಂಬಂದಪಟ್ಟ **2** ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ-**47** ಮತ್ತು **48** ಎಂದು ಗುರುತಿಸಲಾಯಿತು.

ವಿಶೇಷ ತಹಶೀಲ್ದಾರ್, ಭೂನ್ಯಾಯ ಮಂಡಳಿ ಇವರು ನನಗೆ ಕಳುಹಿಸಿದ ಡಿಮಾಂಡ್ ಸ್ಟೇಟ್ ಮೆಂಟನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ-**49** ಎಂದು ಗುರುತಿಸಲಾಯಿತು.

ಉಡುಪಿಯ ವಿಶೇಷ ತಹಶೀಲ್ದಾರ್ ಅವರು ನನಗೆ ಕೊಟ್ಟ ಫಾರಂ ನಂಬ್ರ **10** ನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ-**50** ಎಂದು ಗುರುತಿಸಲಾಯಿತು.

ಗ್ರಾಮ ಲೆಕ್ಕಾಧಿಕಾರಿ ನನಗೆ ನೀಡಿದ ಸ್ವಾಧೀನ ದೃಢಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿ.ಡಿ-**51** ಎಂದು ಗುರುತಿಸಲಾಯಿತು.

ಶೇಷ ಶೆಟ್ರ ಮಗ ಅಣ್ಣಪ್ಪ ಶೆಟ್ಟಿ ಇವರ ಮರಣ ಪ್ರಮಾಣಪತ್ರ ಹಾಜರುಪಡಿಸಿದ್ದು ಅದನ್ನು ನಿ.ಡಿ-**52** ಎಂದು ಗುರುತಿಸಲಾಯಿತು.

**11.08.1987** ರಂದು ನನ್ನ ತಂದೆ ನನಗೆ ಬರೆದುಕೊಟ್ಟ ಜನರಲ್ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿದ್ದು ಅದಕ್ಕೆ ವಾದಿ ಪರ ಶ್ರೀ ಕೆ.ಪಿ ವಕೀಲರು ಮುದ್ರಾಂಕ ಶುಲ್ಕದ ಬಗ್ಗೆ ತಕರಾರು ಇದೆ ಎಂದು ಹೇಳಿದ್ದು ಅದಕ್ಕೆ ಒಳಪಡಿಸಿ ಅದನ್ನು ನಿ.ಡಿ-**53** ಎಂದು ಗುರುತಿಸಲಾಯಿತು.

ಓ.ಎಸ್ **173/1996** ರಲ್ಲಿ ನನಗೆ ಬಂದ ಐಎ-**2** ನ ನೋಟೀಸು ಹಾಗೂ ಅರ್ಜಿಯ ಕಾಪಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಡಿ-**54** ಮತ್ತು **55** ಎಂದು ಗುರುತಿಸಲಾಯಿತು. ಸದ್ರಿ ದಾವೆಯ ವಿವಾದಾಂಶದ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿ.ಡಿ-**56** ಎಂದು ಗುರುತಿಸಲಾಯಿತು.

**07.04.1997** ರಂದು ಹೆಚ್ ಎನ್ ಶೆಟ್ಟಿ ವಕೀಲರು ನನಗೆ ಕಳುಹಿಸಿದ ನೋಟೀಸನ್ನು ಹಾಜರುಪಡಿಸಿದ್ದು ಅದನ್ನು ನಿ.ಡಿ-**57** ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ಶ್ರೀ ಡಿ ಎಸ್ ವಕೀಲರು ಕಾಲಾವಕಾಶ ಕೋರಿದ್ದಾರೆ, ಅನುಮತಿಸಿದೆ)

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ